dc-380
T-P-2

Reg B G No.155 28-9-1968

SATYAVADI, Daily MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಸಂಪಾದಕೀಯ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತದಲ್ಲಿ ಮಿಲಿಯಗಟ್ಟಲೆ ಜನರಿಗೆ ನಿರುದ್ಯೋಗ

ಸತ್ಯವಾದಿ ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಶ್ರೀಮನ್ಮಹಾರಾಜರವರ ರಿಟ್

ಬೆಂಗಳೂರು— ಮೈಸೂರು ರೀಸ್ ಕೋರ್ಸ್ ಹತ್ತಿರದ ತಮ್ಮ 5 ಎಕ್ರೆ 23 ಗುಂಟೆ ಭೂಮಿಯನ್ನು ಟ್ರಸ್ಟ್ ಬೋರ್ಡಿನವರು ವಶಪಡಿಸಿಕೊಳ್ಳಬೇಕೆಂದಿರುವದರ ವಿರುದ್ಧ ಶ್ರೀಮನ್ಮಹಾರಾಜರವರು ಹೈಕೋರ್ಟಿನಲ್ಲಿ ರಿಟ್ ಹಾಕಿರುವರು. ಈ ಬಗ್ಗೆ ಸ್ಟೇ ಆರ್ಡರೂ ಕೊಡಲಾಗಿದೆ.

ದರ ಏರಿಕೆ

ಧಾನ್ಯವೆತ್ತುವಳಿ ದರವನ್ನು ಈಗಿನ ದಕ್ಕಿಂತ ರೂ. 5 ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ ಎಂದು ಬೆಂಗಳೂರು ವಾರ್ತೆ.

ಇಂದು
ಸ್ಥಾಪಕರ ದಿನಾಚರಣೆ

ಇಲಿಗಳ ಸಂಖ್ಯೆ

ಬೆಂಗಳೂರು— ದೇಶದಲ್ಲಿಯ ಇಲಿಗಳ ಸಂಖ್ಯೆ 4200 ಮಿಲಿಯವೆಂದು ಅಂದಾಜು ಮಾಡಲಾಗಿದೆ.

ಲಾಯರುಗಳಿಗೆ ಹಿತೋಕ್ತಿ

ಬೆಂಗಳೂರು— ನ್ಯಾಯಾಂಗ ವೃತ್ತಿಯಲ್ಲಿನ ಯಶಸ್ಸಿಗೆ ಶೇಕಡ 10 ರಷ್ಟು ಕಾನೂನು ಜ್ಞಾನ, 20 ವ್ಯವಹಾರಜ್ಞಾನ 30 ರಷ್ಟು ಆರೋಗ್ಯ, 40 ರಷ್ಟು ಅದೃಷ್ಟ ಅವಶ್ಯಕವೆಂದು ಸುಪ್ರೀಂ ಕೋರ್ಟಿದ ಮಾಜಿ ಮುಖ್ಯ ನ್ಯಾಯಾಧೀಶರಾದ ಶ್ರೀ ಎಸ್. ಆರ್. ದಾಸ್‌ರವರು ಹೇಳಿದರು. ಲಾಯರುಗಳಿಗೆ ಮಾಡಿದ ಹಿತಬೋಧೆಯಲ್ಲಿ, ಕಕ್ಷೀಗಾರರ ಮತ್ತು ವೃತ್ತಿ ಬಗ್ಗೆ ಶ್ರದ್ಧೆ ಹೊಂದಿರಬೇಕೆಂದೂ, ಎದುರಾಳಿಯ ಬಗ್ಗೆ ಹಿತಕರವಾಗಿರಬೇಕೆಂದೂ, ಜಡ್ಜರು ಕುಪಿತವಾಗುವಂತೆ ಲಂಬವಾದ, ಪುನರುಕ್ತಿಯ ವಾದಮಾಡಬಾರದೆಂದೂ, ಕಕ್ಷೀಗಾರರಿಗೆ ಸಂಶಯ ತುಂಬದೆ, ಅವರಿಗೆ ಸೂಕ್ತ ಸಲಹೆ ನೀಡಬೇಕೆಂದೂ ತಿಳಿಸಿದರು.

★

ಬಳ್ಳಾರಿ— ಟ್ರಕ್‌ನಲ್ಲಿ ಆಂಧ್ರಗಡಿಗೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ರೂ. 14000 ಬೆಲೆಯ 95 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ.

ನಿರುದ್ಯೋಗಿಗಳು

ನವದೆಹಲಿ— ಭಾರತದಲ್ಲಿ ಇಂದು ಎಷ್ಟು ಮಂದಿ ಉದ್ಯೋಗಿಗಳಿರುವರೆಂದು ನಿರಕ್ಕಾಗಿ ಗೊತ್ತಾಗಿಲ್ಲ – ವಿವಿಧ ರೀತಿಯ ಅಂದಾಜಿದೆ – ಮುಂದಿನ ವರ್ಷ ನಾಲ್ಕನೆ ಯೋಜನೆ ಪ್ರಾರಂಭವಾಗುವಾಗ ಸುಮಾರು 10.5 ಮಿಲಿಯ ನಿರುದ್ಯೋಗಿಗಳಿರುವರೆಂದು ಒಂದು ಅಂದಾಜು ; 16 ಮಿಲಿಯ ಇರುವರೆಂದು ಇನ್ನೊಂದು ಅಂದಾಜು

○

ಮೈಸೂರಿಗೆ ಹೆಚ್ಚು ಗೋಧಿ

ನವದೆಹಲಿ— ಮೈಸೂರು ರಾಜ್ಯವು ಅನಾವೃಷ್ಟಿ ಪರಿಸ್ಥಿತಿಯಿಂದ ಪಾರಾಗಲು ಕೇಂದ್ರವು ರಾಜ್ಯಕ್ಕೆ 30000 ಟ್ಸ್ ಗೋಧಿ, 10000 ಟ್ಸ್ ಕೆಂಪು ಜೋಳ ನಿಗದಿಮಾಡಿದೆ.

★

ಕಚ್ ಸತ್ಯಾಗ್ರಹ

ಅಹಮದಾಬಾದು— ಕಚ್ ಶರಣು ವಿರುದ್ಧ ಸತ್ಯಾಗ್ರಹವನ್ನು ಅಕ್ಟೋಬರಿನಿಂದ ಪುನಃ ಜೋರಾಗಿ ಪ್ರಾರಂಭಿಸಲು ಎಸ್ಸೆಸ್ಪಿ ನಿರ್ಧರಿಸಿದೆ.

★

ಭಾರತಕ್ಕೆ ಅಕ್ಕಿ

ನವದೆಹಲಿ— ಭಾರತಕ್ಕೆ ಫಿಲಿಪ್ಪೈನ್ 25000 ಟ್ಸ್ ಅಕ್ಕಿ ಸರಬರಾಜು ಮಾಡುವ ಒಪ್ಪಂದವಾಯಿತು.

★

ನವದೆಹಲಿ— ತಮ್ಮ ಕೇಳಿಕೆ ನೆರವೇರಿಸಲ್ಪಡದಿದ್ದರೆ ಕೇಂದ್ರ ಸರ್ಕಾರಿ ನೌಕರರು ಅನಿರ್ದಿಷ್ಟಕಾಲ ಮುಷ್ಕರ ಹೂಡಬೇಕಾದೀತೆಂದು ಕಾರ್ಯಾಚರಣ ಸಮಿತಿಯ ವಕ್ತಾರರೊಬ್ಬರು ಹೇಳಿರುವರು.

ಪಾರ್ಲಿಮೆಂಟು ಸದಸ್ಯರಾಗಲು

ಪಶ್ಚಿಮ ಜರ್ಮನಿಯಲ್ಲಿ ನಡೆಸಿದ ಸರ್ವೆ ಪ್ರಕಾರ, ಅಲ್ಲಿಯ ಕೇವಲ ಶೇಕಡಾ 10 ಮಂದಿ ಪಾರ್ಲಿಮೆಂಟು ಸದಸ್ಯರಾಗುವ ಕುತೂಹಲ ಹೊಂದಿರುವರು.

★

ಅಧ್ಯಕ್ಷ ಉಪಾಧ್ಯಕ್ಷರು

ಮೈಸೂರು — ಶ್ರೀ ಬಿ. ಸಿ. ಲಿಂಗಯ್ಯನವರು ಅಧ್ಯಕ್ಷಕ್ಷರಾಗಿಯೂ, ಶ್ರೀ ಕೆ. ವಿ. ಅನಂತರಾಮಯ್ಯನವರು ಉಪಾಧ್ಯಕ್ಷರಾಗಿಯೂ ಮತ್ತೆ ಚುನಾಯಿಸಲ್ಪಟ್ಟರು.

★

ಭಾರತದ ವಿಜಯ

ರೋಂ— ಇಲ್ಲಿ ನಡೆದ ಹಾಕಿ ಸಂಥದ ಬುಧವಾರ ಭಾರತದ ಟೀಮು ಇಟಲಿ ಟೀಮನ್ನು ಸೋಲಿಸಿತು ; ಇನ್ನು 3 ಆಟಗಳನ್ನಾಡಿ, ಮೆಕ್ಸಿಕೋಗೆ ಪ್ರಯಾಣ ಹೂಡುವದು.

●

ಸುಗ್ರೀವಾಜ್ಞೆ ಹೊರಡಿದಿದ್ದರೆ

ನವದೆಹಲಿ— ಕೇಂದ್ರ ನೌಕರರ ಮುಷ್ಕರ ಪ್ರತಿಬಂಧಿಸಿ ಸುಗ್ರೀವಾಜ್ಞೆ ಹೊರಡಿಸದಿದ್ದಿದ್ದರೆ ಪೂರ್ಣ ಸರಕಾರದ ಆಡಳಿತ ಯಂತ್ರವು ನಿಸ್ಸತ್ವಗೊಂಡು ದೇಶದಲ್ಲಿ ಅನಾಯಕ ಪರಿಸ್ಥಿತಿ ಉಂಟಾಗುತ್ತಿತ್ತೆಂದು ಗೃಹ ಮಂತ್ರಿ ಶ್ರೀ ಚವ್ಹಾಣ್ ಕಾಂಗ್ರೆಸ್ ಪಾರ್ಲಿಮೆಂಟರಿ ಕಾರ್ಯಕಾರಿ ಸಮಿತಿಯಲ್ಲಿ ತಿಳಿಸಿದರು.

ಗಾಂಧಿ ಶತಾಬ್ದಿ

ನವದೆಹಲಿ— ಮಹಾತ್ಮಾ ಗಾಂಧೀಜಿಯವರ 99 ನೇ ಜನ್ಮ ವಾರ್ಷಿಕೋತ್ಸವವನ್ನು ವಾಷಿಂಗ್ಟನ್ನಲ್ಲಿ ಹೊವಾರ್ಡ್ ವಿದ್ಯಾಶಾಲೆಯ ಪ್ರದೇಶದಲ್ಲಿರುವ ಆಂಡ್ರೂ ರಾಂಕೆ ಸ್ಮಾರಕ ಸಭಾಂಗಣದಲ್ಲಿ ಅಕ್ಟೋಬರು 2 ರಂದು ಆಚರಿಸಲಾಗುತ್ತಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು—ತ್ರಿಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಸ್ಮೃತಿರತ್ನಾಕರೇ ದಕ್ಷಃ ॥
ಸಂಧ್ಯಾಹೀನೋಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು ।
ಯದನ್ಯತ್ಕುರುತೇಕರ್ಮತತಸ್ಯ ಫಲಮಶ್ನುತೇ ॥

ದಕ್ಷಃ ॥ ಅಹೋರಾತ್ರಸ್ಯಯಸ್ಸಂಧಿಸ್ಸೂರ್ಯನಕ್ಷತ್ರವರ್ಜಿತಃ ।
ಸಾತುಸಂಧ್ಯಾಸಮಾಖ್ಯಾತಾಮುನಿಭಿಸ್ತತ್ವದರ್ಶಿಭಿಃ ॥

— ಸಂಧ್ಯಾನುಷ್ಠಾನವನ್ನು ಮಾಡದವನು ಅಪರಿಶುದ್ಧನು; ಯಾವ ಕರ್ಮಾನುಷ್ಠಾನಕ್ಕೂ ಯೋಗ್ಯನಲ್ಲ. ಸಂಧ್ಯಾನುಷ್ಠಾನವನ್ನು ಮಾಡದವನು ಮತ್ಯಾವ ಕರ್ಮಗಳನ್ನು ಮಾಡಿದಾಗ್ಯೂ ಆ ಕರ್ಮ ಫಲವನ್ನು ಹೊಂದಲಾರನು.

ಸೂರ್ಯನಿಂದಲೂ, ನಕ್ಷತ್ರಗಳಿಂದಲೂ ವರ್ಜಿತವಾದ ಸಂಧಿಕಾಲವೇ ಸಂಧ್ಯೆಯೆಂದು ತತ್ವದರ್ಶಿಗಳಾದ ಮಹರ್ಷಿಗಳಿಂದ ನಿಶ್ಚಯಿಸಲ್ಪಟ್ಟಿರುವುದು.

— ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ದೇವರಿಗೆ ಸಮರ್ಪಿಸು —

ಜಗತ್ತಿನಲ್ಲಿರುವ ಸಮಸ್ತ ವಸ್ತುಗಳನ್ನೂ ಪರಮಾತ್ಮನು ಸೃಷ್ಟಿಸಿದ್ದಾನೆ. ಸ್ಥಾವರಜಂಗಮಾತ್ಮಕವಾದ ಸಮಸ್ತ ಜೀವಿಗಳ ದೇಹಧಾರಣೆಗೆ ಬೇಕಾದ ಆಹಾರವನ್ನು ಸೃಷ್ಟಿಸಿರುವವನೂ ಪರಮಾತ್ಮನೇ. ಆದುದರಿಂದ ಮಾನವರು ತಮ್ಮ ದೇಹಧಾರಣೆಗಾಗಿ ತೆಗೆದುಕೊಳ್ಳುವ ಆಹಾರವನ್ನು ಮುಂಚಿತವಾಗಿ, ಕೃತಜ್ಞತಾಭಾವದಿಂದ ದೇವರಿಗೆ ನಿವೇದನಮಾಡಿ ನಂತರ ತಾವು ಉಪಯೋಗಿಸಬೇಕಾದುದು ಕರ್ತವ್ಯವಾಗಿರುತ್ತದೆ. ಆ ರೀತಿ ನಿವೇದನ ಮಾಡುವುದರಿಂದ, ಆಹಾರವನ್ನು ಸಿದ್ಧಪಡಿಸುವವರಿಗೆ ನಡೆಯಬಹುದಾದ ಅನೇಕ ಪಾಪಗಳು ಪರಿಹಾರವಾಗುತ್ತವೆ.

SHAKTI
SUDHA
A Superb Tonic

Protect the Cow



ಗೋರಕ್ಷಣೆಗೆ ಮಾಡಬೇಕಾದ ಕಾರ್ಯಗಳು ಹೆಚ್ಚಿವೆ ಎಂದು ಸಭೆಯಲ್ಲಿ ಸೇರಿದ್ದ ಜನರು ಅಭಿಪ್ರಾಯಪಟ್ಟರು

ಪುಡ್‌ಲಾಂಡ್ ಜನಪ್ರಿಯತೆ 3 ನೇ ವಾರ
ವೈಭವ ಆರಂಭ
ಮನಮೋಹಕ ಹಿಂದಿ ಚಿತ್ರ
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
ಮತ್ತಷ್ಟುಗಟ್ಟಿ ಪ್ರಯೋಗಿಸಿ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹೀದಾ ರೆಹಮಾನ್, ಮನೂಜ್ ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರಾ ಜನಪ್ರಿಯ 5 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಅಶೋಕ ಏಜೆನ್ಸೀಸ್
ಲೈನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂ ಸನ್ನಿಧಿಯಲ್ಲಿ ದೊರೆಯುತ್ತವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid. Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4